ಇ) ಮಂತಾ ಈ) ದೊರಕುತ್ತಿರುವ ಅನುದಾನಕ್ಕನುಗುಣವಾಗಿ ರಸ್ತೆಯ ವಾರ್ಷಿಕ ದುರಸ್ತಿ ಕೆಲಸಗಳನ್ನು ಕೈಗೊಂಡು ವಾಹನ ಸಂಚಾರಕ್ಕೆ ಯೋಗ್ಯವಾಗಿರುವಂತೆ ರಸ್ತೆಯನ್ನು ಇಟ್ಟುಕೊಳ್ಳಲಾಗುತ್ತಿದೆ. ಮೈಸೂರು ಮಾನಂದವಾಡಿ ರಸ್ತೆಯಲ್ಲಿ ೧೯೭.೫೦ ಕಿ.ಮೀ. ಇಂದ ೨೩೧.೮೦ ಕಿ.ಮೀ ವರೆಗೆ ೫೨ ಲಕ್ಷ ಪರಿಷ್ಕೃತ ಅಂದಾಜಿನಂತೆ ಕೆಲಸ ಪ್ರಗತಿಯಲ್ಲಿದೆ. ಈವರೆವಿಗೆ ಸುಮಾರು ೩೫ ಲಕ್ಷ ರೂ. ಗಳು ಖರ್ಚಾಗಿದೆ. ರಸ್ತೆಯ ಉಳಿದ ಭಾಗಗಳನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ಹಣದ ಲಭ್ಯತೆಯ ಆಧಾರದ ಮೇಲೆ ತೆಗೆದುಕೊಳ್ಳುವುದನ್ನು ಪರ್ಯಾಲೋಚಿಸಲಾಗುವುದು.

ಚಿಕ್ಕಮಂಗಳೂರಿಗೆ ನೀರು ಒದಗಿಸುವ ಬಗ್ಗೆ

೯೮೩. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಪಟ್ಟಣಕ್ಕೆ ನೀರು ಒದಗಿಸಲು ಮತ್ತು ೧೮೦೦ ಎಕರೆ ನೀರಾವರಿ ಮಾಡಲು ಕೆರೆ ನಿರ್ಮಿಸಲು ಸರ್ಕಾರದಿಂದ ಮಂಜೂರಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಕೆರೆಯನ್ನು ಕಟ್ಟಲು ಪ್ರಾರಂಭಮಾಡಿ ಇತ್ತೀಚೆಗೆ ನಿಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮಂಜೂರಾಗಿರುವ ಶ್ರೀ ರಾಮೇಶ್ವರ ಕೆರೆಯು ೩೬.೫೦ ಲಕ್ಷ ರೂಪಾಯಿಗಳ ಅಂದಾಜಿನಂತೆ, ಚಿಕ್ಕಮಗಳೂರು ತಾಲ್ಲೂಕಿನ ೧೪೦೦ ಎಕರೆ ತರಿ ಬೆಳೆಗೆ ಪೂರಕವಾಗಿ ನೀರನ್ನು ಒದಗಿಸಲು ಮಾತ್ರ ಉದ್ದೇಶಿಸಲಾಗಿದ್ದು, ಚಿಕ್ಕಮಗಳೂರು ಪಟ್ಟಣಕ್ಕೆ ನೀರೊದಗಿಸುವುದಲ್ಲ.

ಆ) ಹೌದು.

ದೂದಗಂಗಾ ಬಲದಂಡೆ ಕಾಲುವೆ ನಿರ್ಮಾಣದ ಬಗ್ಗೆ

೧೯೯೯. ಶ್ರೀ ವೀರ ಕುಮಾರ್ ಪಾಟೀಲ್ (ನಿಪ್ಪಾಣಿ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದೂದಗಂಗಾ (ಕಲಮವಾಡಿ) ಬಲದಂಡೆ ಕಾಲುವೆ ನಿರ್ಮಾಣದ ಬಗ್ಗೆ, ಕರ್ನಾಟಕ ಸರ್ಕಾರವು ಮಹಾರಾಷ್ಟ್ರ ಸರ್ಕಾರಕ್ಕೆ ತನ್ನ ಪಾಲಿನ ಮಂತಿಗೆಯನ್ನು ವಿತರಣೆ ಮಾಡಿದೆಯೇ ?

ಆ) ಹಾಗಿದ್ದಲ್ಲಿ, ಒಟ್ಟು ಮೊತ್ತವೆಷ್ಟು ?

ಇ) ಕರ್ನಾಟಕದಲ್ಲಿ ಹರಿದು ಹೋಗುವ ಸದರಿ ಯೋಜನೆಯ ಬಲದಂಡೆ ಕಾಲುವೆ ನಿರ್ಮಾಣದ ಕೆಲಸವನ್ನು ಯಾವಾಗ ಪ್ರಾರಂಭಿಸಿ ಯಾವಾಗ ಪೂರ್ಣಗೊಳಿಸಲಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಮೇಲ್ಕಾಣಿಸಿದ ಉತ್ತರದಂತೆ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಇ) ಕರ್ನಾಟಕ ಸರ್ಕಾರದಿಂದ ಮಾಡಬೇಕಾದ ಕಾರ್ಯಗಳೆಂದರೆ ಕರ್ನಾಟಕ ರಾಜ್ಯದಲ್ಲಿ ಕೊನೆಗೊಳ್ಳುವ ಬಿದರೀ ಶಾಖಾ ಕಾಲುವೆ ಮತ್ತು ನಿಡೋರಿ ಶಾಖಾ ಕಾಲುವೆ (ಬಲದಂಡೆ ಕಾಲುವೆಯಿಂದ) ಈ ಕಾರ್ಯಗಳು ಇನ್ನೂ ಶೋಧನಾ ಹಂತದಲ್ಲಿವೆ. ನಿಡೋರಿ ಶಾಖಾ ಕಾಲುವೆಯ ಸರ್ವೆ ಕಾರ್ಯಗಳು ಮುಗಿದಿರುತ್ತವೆ ಮತ್ತು ಬಿದರೀ ಶಾಖಾ ಕಾಲುವೆಯ ಸರ್ವೆ ಕಾರ್ಯವು ಪ್ರಗತಿಯಲ್ಲಿದೆ. ಉಳಿದ ಸರ್ವೆ ಕಾರ್ಯವು ಒಂದು ವರ್ಷದಲ್ಲಿ ಮುಗಿಯುವ ನಿರೀಕ್ಷೆ ಇರುತ್ತದೆ.